ನಿಸ್ಪೋಡನೆ

# ಗಗನಮುಖಿ ಬೆಲೆಗಳು, ಪಾತಾಳಮುಖಿ ಜೀವನ

ಭಾರತೀಯರ ಮಾನಸಿಕ ಕ್ಷೋಭೆಗೆ ಬೆಲೆ ಏರಿಕೆಯೂ ಒಂದು ಕಾರಣವಾಗಿದೆ. ಜೀವನಮಟ್ಟ ಸುಧಾರಣೆಗೆ ಒತ್ತುನೀಡಬೇಕಾದ ಸರ್ಕಾರಗಳು ಹಾಗೂ ಸರ್ಕಾರಿ ಪೋಷಿತ ಸಂಸ್ಥೆಗಳು, ಜೀವನವನ್ನು 'ಮಟ್ಟ' ಹಾಕಲು ಬೆಲೆ ಏರಿಕೆಯನ್ನು ಬಳಸಿಕೊಳ್ಳುತ್ತಿರುವುದು ದುರದೃಷ್ಟಕರ.

ಹಾಲು, ನೀರು, ಟೋಲ್, ಮೆಟ್ರೊ, ವಿದ್ಯುತ್ – ಇದು ಬೆಲೆ ಏರಿಕೆಯ ಸಮಯ. ಒಂದೆಡೆ ಬಿಸಿಲು ಏರಿಕೆ; ಇನ್ನೊಂದೆಡೆ ಹೆಚ್ಚುತ್ತಿರುವ ತಾಪಮಾನಕ್ಕೆ ಸ್ಪರ್ಧೆ ನೀಡುವಂತೆ ಬೆಲೆಗಳ ಹೆಚ್ಚಳ. ಒಂದರ ನಂತರ ಮತ್ತೊಂದರ ಬೆಲೆ ಜ್ವರದ ಕಾವಿನಂತೆ ಹೆಚ್ಚುತ್ತಿರುವುದನ್ನು ನೋಡಿದರೆ, ಬೆಲೆ ಏರಿಕೆಯ ಎದುರು ಬೇಸಿಗೆಯೇ ಹೆಚ್ಚು ಸಹ್ಯ ಎಂದು ಜನಸಾಮಾನ್ಯನಿಗೆ ಅನ್ನಿಸಿದರೆ ಆಶ್ಚರ್ಯವೇನೂ ಇಲ್ಲ. ಈ ಏರಿಕೆಯ ನಡುವೆ ನಮ್ಮ ಶಾಸಕರ ಸಂಬಳ ಹಾಗೂ ಭತ್ಯೆಯೂ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ!

ವರ್ಷ ಪೂರ್ತಿ ಒಂದಲ್ಲಾ ಒಂದು ಬೆಲೆ ಏರಿಕೆಯ ಸುದ್ದಿ ಇದ್ದೇ ಇರುತ್ತದೆ. ಈ ಏರಿಕೆ ಒಂದು ಬಗೆಯಲ್ಲಿ ಚಕ್ರವಿದ್ದಂತೆ. ವಿದ್ಯುತ್ ದರ ಏರಿದರೆ, ಉತ್ಪಾದಕರು ತಮ್ಮ ಸರಕುಗಳ ಬೆಲೆ ಪರಿಷ್ಕರಿಸುತ್ತಾರೆ. ಹಾಲು ದುಬಾರಿಯಾದರೆ ಹೋಟೆಲ್‌ಗಳಲ್ಲಿನ ಚಹಾ–ಕಾಫಿ ಗ್ರಾಹಕರ ಕೈಸುಡುತ್ತದೆ. ಟೋಲ್ ಶುಲ್ಕದಲ್ಲಿನ ಏರಿಕೆಯಿಂದ ಪ್ರಯಾಣ ದುಬಾರಿಯಾಗುವುದರ ಜೊತೆಗೆ, ದಿನಬಳಕೆ ವಸ್ತುಗಳೂ ತುಟ್ಟಿಯಾಗುತ್ತವೆ.

ಜಗತ್ತೇ ಒಂದು ಪೇಟೆಯಾಗಿರುವಾಗ ಬೆಲೆ ಏರಿಕೆ ಸಹಜ ಹಾಗೂ ಅನಿವಾರ್ಯ. ಆದರೆ, ಈ ಏರಿಕೆ ವೈಜ್ಞಾನಿಕವಾಗಿರಬೇಕು, ಬಳಕೆದಾರರಿಗೆ ಹೊರೆಯಾಗದಂತೆ ಇರಬೇಕು. ವಿದ್ಯುತ್ ಇಲಾಖೆಯ ಉದಾಹರಣೆಯನ್ನು ನೋಡಿ. ರಾಜ್ಯದ ಒಟ್ಟು ಉತ್ಪಾದನೆಯಲ್ಲಿ ಶೇ. 10ಕ್ಕೂ ಹೆಚ್ಚು ಪ್ರಮಾಣದ ವಿದ್ಯುತ್ ಅಕ್ರಮ ಸಂಪರ್ಕಗಳ ಮೂಲಕ ಸೋರಿಕೆಯಾಗುತ್ತಿದೆ. ಈ ಕಳವಿನ ಬಗ್ಗೆ ಇಲಾಖೆ ಕಣ್ಣು ಮುಚ್ಚಿಕೊಂಡಿದೆ. ಸೋರಿಕೆಯ ಜೊತೆಗೆ ದೂರದರ್ಶಿತ್ವವಿಲ್ಲದ ಯೋಜನೆಗಳನ್ನು ರೂಪಿಸಿ, ಅವುಗಳ ಹೊರೆಯನ್ನು ಜನಸಾಮಾನ್ಯರ ಮೇಲೆ ಹೇರುತ್ತಿದೆ. ಸ್ಮಾರ್ಟ್ ಮೀಟರ್ ರೀತಿಯ ಯೋಜನೆಗಳು ಜನರಿಗೆ ಅನುಕೂಲ ಆಗುವ ಬದಲು ಸುಲಿಗೆಯ ರೂಪದಲ್ಲಿ ಕಾಣಿಸುತ್ತಿವೆ. ಮನಸ್ಸಿಗೆ ಬಂದಂತೆ ದರ ಹೆಚ್ಚಿಸುವ ವಿದ್ಯುತ್ ಸರಬರಾಜು ಕಂಪನಿಗಳು ನಿರಂತರ ಹಾಗೂ ಗುಣಮಟ್ಟದ ವಿದ್ಯುತ್ ಕೊಡುವಲ್ಲಿ ಮಾತ್ರ ವಿಫಲವಾಗುತ್ತಿವೆ. ಟೋಲ್ ಶುಲ್ಕವನ್ನು ನಿಯಮಿತವಾಗಿ ಹೆಚ್ಚಿಸುವಲ್ಲಿ ತೋರುವ ಶಿಸ್ತು, ಹೆದ್ದಾರಿಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಇಲ್ಲ.

ದರ ಹೆಚ್ಚಳಕ್ಕೆ ವಿದ್ಯುತ್ ಸರಬರಾಜು ಕಂಪನಿಗಳನ್ನು ಹೊಣೆ ಮಾಡುವ ಮೂಲಕ ಸರ್ಕಾರ ತನ್ನ ಜವಾಬ್ದಾರಿ ಕಳೆದುಕೊಳ್ಳುತ್ತದೆ. ಮೆಟ್ರೊ ರೈಲು ಪ್ರಯಾಣ ತುಟ್ಟಿಯಾದಾಗಲೂ ಸರ್ಕಾರ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಂಡಿತ್ತು. ಪ್ರಯಾಣಿಕರ ತೀವ್ರ ಪ್ರತಿಭಟನೆಗೆ ಕಿಂಚಿತ್ತೂ ಕಿಮ್ಮತ್ತು ಕೊಡದ 'ನಮ್ಮ ಮೆಟ್ರೊ' ತಾನು ಎಲ್ಲರ ಮೆಟ್ರೊ ಅಲ್ಲ ಎನ್ನುವುದನ್ನು ಸಾಬೀತುಪಡಿಸಲು ಹೊರಟಂತಿದೆ. ಪ್ರಯಾಣದರ ಏರಿಕೆ ನಂತರ ಮೆಟ್ರೊ ಪ್ರಯಾಣಿಕರ ಸಂಖ್ಯೆಯಲ್ಲಿ ಇಳಿಕೆಯಾಗಿದ್ದು, ರಸ್ತೆಗಿಳಿಯುತ್ತಿರುವ ಖಾಸಗಿ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದೆ; ಇದರಿಂದಾಗಿ ಬೆಂಗಳೂರಿನ ವಾಯುಮಾಲಿನ್ಯದ ಪ್ರಮಾಣ ಹೆಚ್ಚಾಗಿದೆ ಎನ್ನುವ ವರದಿ, ಮೆಟ್ರೊ ಅಧಿಕಾರಿಗಳಿಗೆ ಪ್ರಯಾಣಿಕರ ಬಗ್ಗೆ ಮಾತ್ರವಲ್ಲದೆ ಸಾಮಾಜಿಕ ಕಾಳಜಿಯೂ ಇಲ್ಲದಿರುವುದನ್ನು ಸೂಚಿಸುವಂತಿದೆ.

ಬೆಲೆ ಏರಿಕೆಯೊಂದಿಗೆ ಸೇವೆಯ ಗುಣಮಟ್ಟ ಹೆಚ್ಚಾಗಬೇಕು. ಆದರೆ, ಗುಣಮಟ್ಟಕ್ಕೂ ಸೇವಾಶುಲ್ಕಕ್ಕೂ ಸಂಬಂಧವೇ ಇಲ್ಲ ಎನ್ನುವ ಪರಿಸ್ಥಿತಿ ನಮ್ಮ ವ್ಯವಸ್ಥೆಯಲ್ಲಿದೆ. ನಾವು ಕಟ್ಟುವ ತೆರಿಗೆಗೂ ದೊರೆಯುವ ಮೂಲಭೂತ ಸೌಕರ್ಯಗಳಿಗೂ ತಾಳೆಯಾಗುವುದು ತೀರಾ ಕಡಿಮೆ. ಅಧಿಕಾರಿಗಳು ಹಾಗೂ ಸರ್ಕಾರದ ಸುಖಕ್ಕಾಗಿ ಬೆಲೆ ಏರಿಕೆಯ ಮೂಲಕ ನಾಗರಿಕರ ಶೋಷಣೆ ನಡೆಯುತ್ತಿದೆ. ಜೀವನಾವಶ್ಯಕ ವಸ್ತು ಹಾಗೂ ಸವಲತ್ತುಗಳ ಬೆಲೆ ಹೆಚ್ಚಾದಾಗಲೆಲ್ಲ ಜನಸಾಮಾನ್ಯ ಹೈರಾಣಾಗುತ್ತಾನೆ. ಇತ್ತೀಚಿನ ವರ್ಷಗಳಲ್ಲಿ ಸಾರ್ವಜನಿಕ ಪ್ರತಿಭಟನೆ ಕ್ಷೀಣವಾಗಿರುವುದು ಕೂಡ ನಾಗರಿಕ ಸೇವೆಗಳು ತುಟ್ಟಿಯಾಗಲು ಕಾರಣವಾಗಿದೆ.

ನಾಗರಿಕ ಸೇವೆಗಳನ್ನು ಒದಗಿಸುವವರಿಗೆ ಬಳಕೆದಾರರ ಹಿತಾಸಕ್ತಿ ಆದ್ಯತೆಯಾಗಬೇಕೇ ಹೊರತು, ಲಾಭ ಮುಖ್ಯವಾಗಬಾರದು. ಹಾಗೆಂದು ಉದ್ಯಮಗಳನ್ನು ನಷ್ಟದಲ್ಲಿ ನಡೆಸಬೇಕು ಎಂದರ್ಥವಲ್ಲ. ಗಳಿಕೆಯ ಪರ್ಯಾಯ ಮಾರ್ಗಗಳ ಹುಡುಕಾಟ ಹಾಗೂ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವುದರೊಂದಿಗೆ ಅನಗತ್ಯ ವೆಚ್ಚಗಳನ್ನು ನಿಯಂತ್ರಿಸಿದಲ್ಲಿ ನಾಗರಿಕ ಸೇವೆಗಳನ್ನು ಕೈಗೆಟಕುವ ಶುಲ್ಕದಲ್ಲಿ ನೀಡುವುದು ಸಾಧ್ಯವಾಗುತ್ತದೆ.

'ಜಾಗತಿಕ ಸಂತೋಷದ ಸೂಚ್ಯಂಕ'ದಲ್ಲಿ ಭಾರತ 118ನೇ ಸ್ಥಾನದಲ್ಲಿದೆ. ಗಾಲಪ್ ಮತ್ತು ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಪರಿಹಾರಗಳ ಜಾಲದ ಸಹಯೋಗದಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ವೆಲ್‌ಬೀಯಿಂಗ್ ರಿಸರ್ಚ್ ಸೆಂಟರ್ ಸಿದ್ಧಪಡಿಸಿರುವ ವರದಿಯಲ್ಲಿ, ಭಾರತೀಯರ ಸಂತೋಷದ ಸೂಚ್ಯಂಕ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ, ಚೀನಾ, ನೇಪಾಳಕ್ಕಿಂತಲೂ ಕಳಪೆಯಾಗಿದೆ. ಭಾರತೀಯರ ಈ ಮಾನಸಿಕ ಕ್ಷೋಭೆಗೆ ಬೆಲೆ ಏರಿಕೆಯೂ ಒಂದು ಕಾರಣವಾಗಿದೆ. ಜೀವನಮಟ್ಟ ಸುಧಾರಣೆಗೆ ಒತ್ತುನೀಡಬೇಕಾದ ಸರ್ಕಾರಗಳು ಹಾಗೂ ಸರ್ಕಾರಿ ಪೋಷಿತ ಸಂಸ್ಥೆಗಳು, ಜೀವನವನ್ನು 'ಮಟ್ಟ' ಹಾಕಲು ಬೆಲೆ ಏರಿಕೆಯನ್ನು ಬಳಸಿಕೊಳ್ಳುತ್ತಿರುವುದು ದುರದೃಷ್ಟಕರ.

■ ರಘುನಾಥ ಚ.ಹ.


ಈಶ್ವರ್